

‘ತಲೆಗೂದಲು ದಾನ ಮಾಡುವ ಪ್ರಕ್ರಿಯೆಯನ್ನು ಹಾಗೆಯೇ ನಿಲ್ಲಿಸದೆ ನನ್ನ ಗೆಳತಿಯರಿಗೂ ತಲೆಗೂದಲು ದಾನ ಮಾಡುವಂತೆ ಪ್ರೇರೇಪಿಸಿದೆ. ಇದಕ್ಕಾಗಿಯೇ ಒಂದು ಗುಂಪು ಕಟ್ಟಿಕೊಂಡು ರೋಟರಿ ಸಹಾಯದಿಂದ ಈ ಸಮಾಜಸೇವೆಗೆ ಚಾಲನೆ ನೀಡಿದೆ. ಸದ್ಯ ಬೆಂಗಳೂರಿನಲ್ಲಿಯೂ ಇದೇ ರೀತಿಯ ತಂಡ ಕಟ್ಟಿಕೊಳ್ಳುವ ಯೋಚನೆ ಇದೆ’ ಎನ್ನುವ ಆದ್ಯಾ ಮಾತುಗಳಲ್ಲಿ ಎಲ್ಲ ತರುಣಿಯರಿಗೊಂದು ಕಿವಿಮಾತಿದೆ. ಆದ್ಯಾಳ ಸಂವೇದನಾಶೀಲ ಮಾತು ಕೇಳಿ: ‘‘ಕ್ಯಾನ್ಸರ್ ರೋಗಿಗಳು, ಅದರಲ್ಲೂ ಮಹಿಳೆಯರು ತಮ್ಮ ತಲೆಗೂದಲು ಕಳೆದುಕೊಂಡು ತಮ್ಮದೇ ರೂಪವನ್ನು ಕನ್ನಡಿಯಲ್ಲಿ ನೋಡಿಕೊಂಡು ಖಿನ್ನತೆಗೆ ಒಳಗಾಗುವ ಸಂಕಟ ನೋಡಿದರೆ ವ್ಯಥೆಯಾಗುತ್ತದೆ. ಕಿಮೋಥೆರಪಿಗೆ ಒಳಗಾದವರು ಅನುಭವಿಸುವ ದೈಹಿಕ, ಮಾನಸಿಕ ಯಾತನೆ ಅಷ್ಟಿಷ್ಟಲ್ಲ ಎಂಬುದು ನಮ್ಮ ತಂಡಕ್ಕೆ ಅರಿವಿತ್ತು. ಇದಕ್ಕಾಗಿಯೇ ಈ ಕೇಶದಾನ ಮಾಡಿದ್ದೇವೆ.’’

## ಶಿಕ್ಷಕಿ-ವಿದ್ಯಾರ್ಥಿನಿಯರ ಮೇಲ್ಪಂಕ್ತಿ

ತಲೆಗೂದಲ ಬಗ್ಗೆ ವ್ಯಾಮೋಹ ಇದ್ದರೂ ದಾನ ಮಾಡಿದವರಲ್ಲಿ ಶಿಕ್ಷಕಿಯರು, ವಿದ್ಯಾರ್ಥಿನಿಯರು ಇದ್ದಾರೆ. ಬೆಂಗಳೂರಿನ ಸೋಫಿಯಾ ಹೈಸ್ಕೂಲ್ ಇಂಟರ್‍ಯಾಕ್ಟ್ ಕ್ಲಬ್‌ನ ವಿದ್ಯಾರ್ಥಿನಿಯರು ಮತ್ತು ಶಿಕ್ಷಕಿಯರು ಕ್ಯಾನ್ಸರ್ ಪೀಡಿತ ರೋಗಿಗಳ ವಿಗ್ ತಯಾರಿಸಲು ತಲೆಗೂದಲು ದಾನ ನೀಡಿದ್ದು, ಕೇಶಾಕಾಂಕ್ಷಿಗಳಿಗೆ ವರದಾನವಾಗಿದೆ. ಶಿಕ್ಷಕಿ ಸ್ನೇಹಾ ರಾಮ್ ತಮ್ಮ 12 ಇಂಚಿನ ಉದ್ದದ ಜಡೆಯನ್ನು ಕತ್ತರಿಸಿ ದಾನವಾಗಿ ನೀಡಿದ್ದಾರೆ. ಸೋಫಿಯಾ ಶಾಲೆಯ ವಿದ್ಯಾರ್ಥಿನಿಯರಾದ ವೈಶಾಲಿ, ಊರ್ವಿ, ನಿಧಿ, ಮೇದಿನಿ ತಲೆಗೂದಲು ದಾನ ಮಾಡಿದವರಲ್ಲಿ ಸೇರಿದ್ದಾರೆ.

ಬೆಂಗಳೂರಿನ ‘ಶ್ರೀಶಂಕರ ಹಾಸ್ಪಿಟಲ್ ಮತ್ತು ಕ್ಯಾನ್ಸರ್ ರಿಸರ್ಚ್ ಸೆಂಟರ್’ನಲ್ಲಿ ಚೆನ್ನೈನ ‘ಚೆರಿಯನ್ ಫೌಂಡೇಷನ್’ ಹಮ್ಮಿಕೊಂಡಿದ್ದ ವಿಗ್ ಡೊನೇಷನ್ ಕ್ಯಾಂಪ್‌ಗೆ ಈ ಶಾಲೆಯ ಇಂಟರ್‍ಯಾಕ್ಟ್ ಕ್ಲಬ್ ಪದಾಧಿಕಾರಿಗಳು ಭೇಟಿ ನೀಡಿದ್ದರು. ಅಲ್ಲಿ ಕ್ಯಾನ್ಸರ್‌ನಿಂದ ತಲೆಗೂದಲನ್ನು ಸಂಪೂರ್ಣವಾಗಿ ಕಳೆದುಕೊಂಡ ಮಹಿಳೆಯರು ಖಿನ್ನತೆಗೆ ಹೋಗಿರುವ ಮಾಹಿತಿ ತಿಳಿದ ವಿದ್ಯಾರ್ಥಿನಿಯರು, ತಮ್ಮ ತಲೆಗೂದಲನ್ನು ದಾನವಾಗಿ ನೀಡಲು ನಿರ್ಧರಿಸಿದರು.

ವಿದ್ಯಾರ್ಥಿನಿಯರು ನೀಡಿದ ಕೂದಲುಗಳಿಂದ ತಯಾರಿಸಿದ ವಿಗ್‌ಗಳು ಬಡ ಮಹಿಳಾ ಕ್ಯಾನ್ಸರ್ ರೋಗಿಗಳ ಬೊಕ್ಕತಲೆಯನ್ನು ಅಲಂಕರಿಸಿದವು. ಅಂದಹಾಗೆ, ಚೆರಿಯನ್ ಫೌಂಡೇಷನ್ ದಾನಿಗಳಿಂದ ತಲೆಗೂದಲು ಸ್ವೀಕರಿಸಿ ವಿಗ್ ತಯಾರಿಸಿ, ಕ್ಯಾನ್ಸರ್‌ನಿಂದ ಬೊಕ್ಕತಲೆಯಾಗಿರುವ ಮಹಿಳೆಯರಿಗೆ ನೀಡುತ್ತಿದೆ.

### ಅತಿ ಕಿರಿಯ ದಾನಿ!

ಅತ್ಯಂತ ಚಿಕ್ಕ ವಯಸ್ಸಿನ ಹುಡುಗಿ ಕಿಯಾರಾ ಪ್ರವೀಣ್ ತನ್ನ 10 ಇಂಚಿನ ತಲೆಗೂದಲನ್ನು ಕ್ಯಾನ್ಸರ್ ಗುಣಮುಖ ಮಹಿಳೆಯರಿಗೆ ವಿಗ್ ತಯಾರಿಸಲು ದಾನ ಮಾಡಿದ್ದಾಳೆ. ಬೆಂಗಳೂರು ಮೂಲದ ಕಿಯಾರಾ ಸದ್ಯ ಅಮೆರಿಕದಲ್ಲಿ ವಾಸಿಸುತ್ತಿದ್ದು, ಅಟ್ಲಾಂಟಾ ಮೂಲದ ಎನ್‌ಜಿಒ ಒಂದಕ್ಕೆ ಈ ದಾನ ಮಾಡಿದ್ದಾಳೆ. ಕಿಯಾರಾ ತನ್ನ ತಲೆಗೂದಲನ್ನು ದಾನ ಮಾಡಿದಾಗ ಈಕೆಗೆ ಕೇವಲ ಒಂದೂವರೆ ವರ್ಷ.